ಯಾವುದನ್ನು ಅನುಷ್ಠಾನ ಮಾಡಬೇಕು ಎಂಬುದನ್ನು ದಯಮಾಡಿ ಸ್ಪಷ್ಟವಾಗಿ ಹೇಳಿ.

ಶ್ರೀ ಬಿ. ರಮಾನಾಥ ರೈ:– ಸರ್ಕಾರ ಯಾವ ನಿರ್ದೇಶನವನ್ನು ಕೊಡುತ್ತದೋ ಅದರ ಪ್ರಕಾರ ಅಧಿಕಾರಿಗಳು ಕೊಡುತ್ತಾರೆ. ಇನ್ನು ಉಳಿದ ವಿಚಾರಗಳೇನಿವೆಯೋ ಅದನ್ನು ತಾವು ಹೇಳಿ. ನಾವು ಅದರ ಬಗ್ಗೆ ಸೂಕ್ತವಾದ ಗಮನವನ್ನು ಕೊಡುತ್ತೇವೆ.

ಉಪನೋಂದಣಿ ಕಚೇರಿಗಳ ಬಗ್ಗೆ.

74(1658); ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

ಅ) ಉತ್ತರಕನ್ನಡ ಜಿಲ್ಲೆಯಲ್ಲಿರುವ ಉಪನೋಂದಣಿ ಕಛೇರಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳೇಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಉಂಟಾಗುತ್ತಿರುವ ಸಾರ್ವಜನಿಕ ತೊಂದರೆಗಳನ್ನು ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ವಿವರ ನೀಡುವುದು)

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಉತ್ತರಕನ್ನಡ ಜಿಲ್ಲೆಯಲ್ಲಿ ಒಟ್ಟು 8 ಉಪ ನೋಂದಣಿ ಕಛೇರಿಗಳಿವೆ. ಅವುಗಳು

1) ಉಪ ನೋಂದಣಿ ಕಛೇರಿ ಕಾರವಾರ
2) ಉಪ ನೋಂದಣಿ ಕಛೇರಿ ಶಿರಸಿ
3) ಉಪ ನೋಂದಣಿ ಕಛೇರಿ ಹೊನ್ನಾವರ
4) ಉಪ ನೋಂದಣಿ ಕಛೇರಿ ಹಳಿಯಾಳ

5) ಉಪ ನೋಂದಣಿ ಕಛೇರಿ ಕುಮಟಾ

6) ಉಪ ನೋಂದಣಿ ಕಛೇರಿ ಮುಂಡಗೋಡ

7) ಉಪ ನೋಂದಣಿ ಕಛೇರಿ ಸಿದ್ದಾಪುರ ಮತ್ತು

8) ಉಪ ನೋಂದಣಿ ಕಛೇರಿ ಭಟ್ಕಳ

ಆ) ಮೇಲಿನ ಕಛೇರಿಗಳಲ್ಲಿ ಒಟ್ಟು 11 ಹುದ್ದೆಗಳು ಖಾಲಿ ಇರುತ್ತವೆ.

ಸರ್ಕಾರದ ಗಮನಕ್ಕೆ ಬಂದಿದೆ.

ಇ) ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಖಾಲಿ ಇರುವ ಉಪನೋಂದಣಾಧಿಕಾರಿಗಳು ಮತ್ತು ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಸಹಮತಿ ಪಡೆದು ಕರ್ನಾಟಕ ಲೋಕ ಸೇವಾ ಆಯೋಗದೊಡನೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುವುದು.

ಸದರಿ ಕಛೇರಿಗಳಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ನೌಕರರಿಂದ ಖಾಲಿ ಇರುವ ಹುದ್ದೆಗಳ ಕೆಲಸ ಕಾರ್ಯಗಳನ್ನು ಹೆಚ್ಚುವರಿಯಾಗಿ ಪ್ರಭಾರ ವ್ಯವಸ್ಥೆಯಿಂದ ನಿರ್ವಹಿಸಲೂ ಸಹ ಕ್ರಮ ಕೈಗೊಳ್ಳಲಾಗಿದೆ. ಈ ತೊಂದರೆಗಳಲ್ಲದೇ, ಬೇರೆ ಯಾವುದಾದರೂ ಸಮಸ್ಯೆಗಳು ಸಾರ್ವಜನಿಕರಿಗೆ ಉಂಟಾದಲ್ಲಿ ಅವುಗಳನ್ನು ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಸಬ್ ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿ ಅನೇಕ ರೀತಿಯ ತೊಂದರೆಗಳನ್ನು ನಾವು ಒಟ್ಟಾಗಿ ಅನುಭವಿಸುತ್ತಿದ್ದೇವೆ. ಅದರಲ್ಲಿ ಮುಖ್ಯವಾಗಿ ಖಾಲಿಯಿರುವಂಥ ಹುದ್ದೆಗಳು. ಖಾಲಿಯಿರುವ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ಎಂದು ನಾನು ಕೇಳಿರುವುದಕ್ಕೆ ಉತ್ತರದಲ್ಲಿ ಉಪ ನೋಂದಣಾಧಿಕಾರಿಗಳು ಮತ್ತು ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆಯ ಸಹಮತಿ ಪಡೆದು ಕರ್ನಾಟಕ ಲೋಕಸೇವಾ ಆಯೋಗದವರೊಡನೆ ಸಮಾಲೋಚಿಸಿ

ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ. ಇದನ್ನು ಕಾಲಮಿತಿಯೊಳಗೆ ತುಂಬುವಂಥದ್ದರ ಬಗ್ಗೆ ವ್ಯವಸ್ಥೆ ಮಾಡುತ್ತೀರ? ಏಕೆಂದರೆ ಅಲ್ಲಿ ಆ ಹುದ್ದೆಗಳೇ ಇಲ್ಲದಿರುವುದರಿಂದ ಅನೇಕ ರೀತಿಯ ತೊಂದರೆಗಳಾಗುತ್ತಿದೆ. ಆದುದರಿಂದ ಯಾವುದಾದರೂ ಕಾಲಮಿತಿಯೊಳಗೆ , , ,

ಅಧ್ಯಕ್ಷರು:– ಅಲ್ಲಿ ಆ ಹುದ್ದೆಗಳೇ ಇಲ್ಲವೆಂದರೆ, ಅಲ್ಲಿ ಆ ಹುದ್ದೆಗಳ ಬಗ್ಗೆ ಈಗಾಗಲೇ posts create ಆಗಿದೆಯೋ, ಇಲ್ಲವೋ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಕೆಲವು ಕಡೆ posts ಇದೆ.

ಅಧ್ಯಕ್ಷರು:– Existing posts ಇದ್ದರೆ ಮತ್ತು ಅದು vacant ಇದ್ದರೆ ಅದನ್ನು ಎಷ್ಟು ದಿವಸಗಳಲ್ಲಿ ತುಂಬುತ್ತೀರಿ ಎಂದು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅದನ್ನೇ ಕೇಳಿರುವುದು.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಇಲ್ಲಿ posts ಇಲ್ಲ. ಸಬ್ ರಿಜಿಸ್ಟ್ರಾರ್ ಇರಬಹುದು ಅಥವಾ ಬೇರೆ ಎಫ್.ಡಿ.ಎ. ಹೀಗೆ ಅದೆಲ್ಲಾ ಇಲ್ಲದೆ ಇರತಕ್ಕಂಥದ್ದನ್ನು ನೋಡಿ ಸದ್ಯಕ್ಕೆ ಯಾವುದೇ ತೊಂದರೆ ಆಗದೇ ಇರತಕ್ಕಂಥ ರೀತಿಯಲ್ಲಿ ತಾತ್ಕಾಲಿಕ ವ್ಯವಸ್ಥೆಗಳನ್ನು ಈಗ ಮಾಡಿದ್ದೇವೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ಅವರು ಕೇಳಿರುವುದು ಇಷ್ಟೇ. ಎಲ್ಲಿ post create ಆಗಿದೆಯೋ, ಅಲ್ಲಿ vacant ಇದ್ದರೆ posting ಮಾಡಿಕೊಡುತ್ತೀರ ಎಂದು ಕೇಳುತ್ತಿದ್ದಾರೆ. ಅದರ ಬಗ್ಗೆ ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಅದರ ಬಗ್ಗೆ ನೋಡಿಕೊಂಡಿದ್ದೇವೆ., vacancy ಇದೆ. ಆ vacancy ಯನ್ನು ಯಾವ ರೀತಿ fill up ಮಾಡಬೇಕು ಎಂಬ ಬಗ್ಗೆ KPSC ಯವರನ್ನು ಕೇಳಿದ್ದೇವೆ, promotion ಗಳನ್ನು ಕೂಡ ಕೊಡುತ್ತಿದ್ದೇವೆ. ಸದ್ಯಕ್ಕೆ ವ್ಯವಸ್ಥೆ ಮಾಡಿದ್ದು ಯಾವುದೇ ಸಬ್ ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿಯೂ ಕೂಡ ಯಾವುದೇ ರೀತಿಯಲ್ಲಿಯೂ ಸಾರ್ವಜನಿಕರಿಗೆ ತೊಂದರೆ ಆಗದೇ ಇರದಂತೆ ಅಗತ್ಯ ವ್ಯವಸ್ಥೆಗಳನ್ನು ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅದು ಆ ರೀತಿಯಾಗುವುದಿಲ್ಲ.

ಅಧ್ಯಕ್ಷರು:– ನೀವು ಆಗುವುದಿಲ್ಲ. ಎನ್ನುತ್ತೀರಿ, ಅವರು ಸರಿಯಾಗಿ ಹೇಳುವುದಿಲ್ಲ. ಹೀಗಾದರೆ ಹೇಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಅವರು ಆರ್ಥಿಕ ಇಲಾಖೆಯ ಜೊತೆ ಸಮಾಲೋಚನೆ, ಕೆ.ಪಿ.ಎಸ್.ಸಿ. ಯವರ ಜೊತೆ ಸಮಾಲೋಚನೆ ಮಾಡಿದ ನಂತರ ನೇಮಕಾತಿ ಎಂದರೆ ಯಾವ ಕಾಲಕ್ಕೆ ಇದು ಆಗುತ್ತದೆ ಹೇಳಿ. ಯಾವುದಾದರೂ ಕಾಲಮಿತಿಯೊಳಗೆ ಇದನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರೋ ಇಲ್ಲವೋ ಎಂಬ ಬಗ್ಗೆ ಹೇಳಬೇಕು. ನಮ್ಮ ಮಲೆನಾಡು ಜಿಲ್ಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಏನಾಗಿದೆಯೆಂದರೆ ಈಗ ಇ–ಸ್ವತ್ತು ಎಂದು ಬಂದಿರುವುದರಿಂದ ರಿಜಿಸ್ಟ್ರೇಶನ್‌ಗೇ ಹೋಗುವುದಕ್ಕೆ ಆಗುತ್ತಿಲ್ಲ. ಭೂಮಿ ಮತ್ತು ಕಾವೇರಿಯನ್ನು ಒಂದೂಗೂಡಿಸದೆ ಇರುವುದರಿಂದ ಸಬ್ ರಿಜಿಸ್ಟ್ರಾರ್ ಆಫೀಸ್‌ಗೇ ಹೋಗುವುದಕ್ಕೆ ಆಗುತ್ತಿಲ್ಲ. ಆ ರೀತಿ ಸಮಸ್ಯೆ ಇ–ಸ್ವತ್ತು ಬಂದಿರುವುದರಿಂದ ಆಗಿದೆ. ನಿಮಗೂ ಕೂಡ ಅದು ಗೊತ್ತಿದೆ. ಇ–ಸ್ವತ್ತಿನಿಂದಾಗಿ ದೊಡ್ಡ ಸಮಸ್ಯೆಯಾಗಿದೆ. ಇದರ ಮಧ್ಯದಲ್ಲಿ ಹುದ್ದೆಗಳು ಕೂಡ ಖಾಲಿಯಿದೆ. ಅಂದರೆ ಇವತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಎಂದರೆ ಜನರಿಗೆ ಬೇಸರ ಬರುವಂತೆ ಸರ್ಕಾರದ ವ್ಯವಸ್ಥೆ ಬಗ್ಗೆ ಬೇಸರ ಬರುವಂತೆ ಮಾಡಿದೆ.

ಅಧ್ಯಕ್ಷರು:– ದಯವಿಟ್ಟು ನೀವು ಹೇಳಿದ್ದು ಸಾಕು. ಮಾನ್ಯ ಸಚಿವರೆ ನೀವು ಉತ್ತರ ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಸಬ್ ರಿಜಿಸ್ಟ್ರಾರ್ ಇಲ್ಲವೆಂದರೆ ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದೇವೆ. ಯಾವುದೇ ಹುದ್ದೆಗಳು ಅಲ್ಲಿ ಏನು ಖಾಲಿ ಇದೆಯೋ ಅದನ್ನೆಲ್ಲವನ್ನೂ ನೋಡಿಕೊಂಡು ತಾತ್ಕಾಲಿಕವಾಗಿ ವ್ಯವಸ್ಥೆ ಮಾಡಿ ಜನರಿಗೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗದಂತೆ ವ್ಯವಸ್ಥೆಗಳನ್ನು ನಾವು ಮಾಡಿದ್ದೇವೆ. ನೀವು ಸೀಮಿತವಾದ ಪ್ರಶ್ನೆ ಕೇಳಿರುವುದಕ್ಕೆ ಉತ್ತರ

ಕೊಟ್ಟಿದ್ದೇನೆ. ನೀವು ಬೇಕಾದರೆ ಇದರ ವಿವರಗಳನ್ನೇ ಕೇಳಿದ್ದರೆ ಇಡೀ ರಾಜ್ಯಕ್ಕೇ ಸಂಬಂಧಪಟ್ಟಂತೆ ಉತ್ತರವನ್ನು ಕೊಟ್ಟುಬಿಡುತ್ತಿದ್ದೆ.

ಅಧ್ಯಕ್ಷರು:– ಅದೆಲ್ಲಾ ಈಗ ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅವರು ಈ ಹುದ್ದೆಗಳನ್ನು ಯಾವಾಗ ತುಂಬುತ್ತಾರೆಂದು ಹೇಳಲಿ. ಇವರು ಹಣಕಾಸು ಇಲಾಖೆ ಮತ್ತು ಕೆಪಿಎಸ್‌ಸಿ ಮೂಲಕ ಮಾಡುತ್ತೇವೆಂದು ಹೇಳುತ್ತಾರೆ.

ಅಧ್ಯಕ್ಷರು:– ಅವರು ಪರ್ಯಾಯ ವ್ಯವಸ್ಥೆ ಮಾಡಿದ್ದೇವೆಂದು ಹೇಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈಗ ಅದು ಹುಲಿ ಗಾಯ ಇದ್ದ ಹಾಗೆ.

ಅಧ್ಯಕ್ಷರು:– ನೀವು ಭಾಷಣ ಮಾಡುವುದು ಬೇಡ. It is over.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅವರು ಯಾವ ಕಾಲ ಮಿತಿಯೊಳಗೆ ಮಾಡುತ್ತಾರೆಂದು ಹೇಳಲಿ.

ಅಧ್ಯಕ್ಷರು:– ಯಾವ ಕಾಲ ಮಿತಿಯಲ್ಲಿ ಮಾಡುತ್ತೀರೆಂದು ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ನಾನು ತಮಗೆ ಅದರ ವಿಚಾರವನ್ನೇ ಹೇಳುತ್ತಿದ್ದೆನು. ಯಾವ್ಯಾವ ಪೋಸ್ಟ್ ಎಲ್ಲೆಲ್ಲಿ ಖಾಲಿ ಇದೆ, ಅದನ್ನು ಯಾವ ರೀತಿ ತುಂಬಬೇಕೆಂದು ನೋಡಿ ಮಾಡುತ್ತಿದ್ದೇವೆ. ಎಫ್‌ಡಿಎ, ಸಬ್‌ರಿಜಿಸ್ಟ್ರಾರ್ ಹುದ್ದೆಗಳಿಗೆ ಎಷ್ಟು ಪ್ರಮೋಷನ್ ಕೊಡಬೇಕು ಮತ್ತು ಖಾಲಿ ಇರುವ ಬಗ್ಗೆ ಕೆಪಿಎಸ್‌ಸಿಗೆ ಕೇಳಿ ಬರೆದಿದ್ದೇವೆ. ಇನ್ನು ಬೇರೆ ಬೇರೆ ಹುದ್ದೆಗಳು ಎಲ್ಲೆಲ್ಲಿ ಖಾಲಿ ಇದೆ, ಅದನ್ನು ಯಾವ ರೀತಿ ತುಂಬಬೇಕೆಂದು ಯೋಚನೆ ಮಾಡಿದ್ದೇವೆ. ಇವರು ಪ್ರಶ್ನೆ ಏನು ಕೇಳಿದ್ದಾರೆ, ಯಾವುದೇ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಸಾರ್ವಜನಿಕರಿಗೆ ತೊಂದರೆ ಆಗದ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದೇವೆ. Even ಒಂದು ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಸಬ್‌ರಿಜಿಸ್ಟ್ರಾರ್ ಇಲ್ಲದಿದ್ದರೂ ಪಕ್ಕದಲ್ಲಿರುವ ಇನ್ನೊಬ್ಬರು

ಸಬ್‌ರಿಜಿಸ್ಟ್ರಾರ್‌ಗೆ ಜವಾಬ್ದಾರಿ ಕೊಟ್ಟು ಮಾಡಿಸುತ್ತಿದ್ದೇವೆ. ಯಾವುದೇ ತೊಂದರೆಗಳಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಕೇಳುತ್ತಿರುವ ಪ್ರಶ್ನೆ simple ಆಗಿದೆ. ಇವರು ಹಣಕಾಸು ಇಲಾಖೆ ಮತ್ತು ಕೆಪಿಎಸ್‌ಸಿ ಮೂಲಕ ಸಮಾಲೋಚಿಸಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ನಾನು ಯಾವ ಕಾಲಮಿತಿಯೊಳಗೆ ಎಂದರೆ ಮೂರು ತಿಂಗಳು, ಆರು ತಿಂಗಳು ಅಥವಾ ಒಂದು ವರ್ಷದೊಳಗೆ ಮಾಡಿ ಮುಗಿಸಿಕೊಡುತ್ತೀರಾ ಎಂದು ಹೇಳಬೇಕು.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ನಾನು ಆರ್ಥಿಕ ಇಲಾಖೆಯವರ ಗಮನಕ್ಕೆ ತಂದಿದ್ದೇವೆ.

ಅಧ್ಯಕ್ಷರು:– ನೀವು ಸರ್ಕಾರ ನಡೆಸಿದವರು, ಅವರು ಲೋಕಸೇವಾ ಆಯೋಗಕ್ಕೆ ಕಳುಹಿಸಿಕೊಡುತ್ತಾರೆ. ಅದು ಸಿನಿಮಾದಲ್ಲಿ ಆದ ಹಾಗೆ ಆಗುತ್ತದಾ? ಅದಕ್ಕೆ ಅದರದೇ ಆದಂತಹ ನಿಯಮ ಮತ್ತು ಪ್ರಕ್ರಿಯೆ ಪ್ರಕಾರ ಆಗುತ್ತದೆ.

ಒಬ್ಬ ಮಾನ್ಯ ಸದಸ್ಯರು:– ಅವರು ಮಂತ್ರಿಗಳಾಗಿದ್ದಾಗ ಶಿಕ್ಷಕರನ್ನು ತುಂಬಿದ್ದಾರ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಸರ್ಕಾರದ ವ್ಯವಸ್ಥೆಯಲ್ಲಿದ್ದು ಸಹ ಸಹಸ್ರಾರು ಶಿಕ್ಷಕರ ನೇಮಕಾತಿಗಳನ್ನು ಮಾಡಿದ್ದೇನೆ. ನಾನು ಆ ವಿಷಯಕ್ಕೆ ಹೋಗುವುದಿಲ್ಲ. ಇವತ್ತು ಆ ಹುದ್ದೆಗಳನ್ನು ಯಾವತ್ತು ತುಂಬುತ್ತಾರೆಂದು ಹೇಳಲಿ.

ಅಧ್ಯಕ್ಷರು:– ಬಿಡಿ ಮಾರಾಯರೆ, ಇವರು ಉತ್ತರ ಹೇಳುವುದು ಹಾಗೆ ಇದೆ, ಅವರು ಪ್ರಶ್ನೆ ಕೇಳುವುದು ಹಾಗೆ ಇದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆ ಒಂದೇ ಅಲ್ಲ, ಮಾನ್ಯ ಮುಖ್ಯಮಂತ್ರಿಗಳು ಕೂಡ ಗುಲಬರ್ಗಾದಲ್ಲಿ . . .

ಅಧ್ಯಕ್ಷರು:– ಅದು ಮುಖ್ಯಮಂತ್ರಿಗಳಿಗೆ ಸಂಬಂಧಪಡುವುದಿಲ್ಲ. ಆಡಳಿತ ನಡೆಸಿದವರು ನೀವು, ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಒಂದು ಶೀಘ್ರ ಕಾರ್ಯಕ್ರಮ ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ನಮ್ಮ ಇಲಾಖೆಯಲ್ಲಿ stamp and registrationನಲ್ಲಿ ಯಾವ್ಯಾವ ಹುದ್ದೆಗಳು ಖಾಲಿ ಇವೆ, ಎಷ್ಟಿದೆ ಎನ್ನುವ ವಿವರಗಳಿತ್ತು, ಅದನ್ನು ತಾವು ಬೇಡ ಎಂದು ಹೇಳಿದಿರಿ. ಈಗ ಸಧ್ಯಕ್ಕೆ ಯಾವುದೇ ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಕೂಡ ತೊಂದರೆ ಇಲ್ಲದಿರುವ ರೀತಿಯಲ್ಲಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾಡುತ್ತಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು:– ನಾವೇನು ಮಾಡುವುದಕ್ಕೆ ಆಗುವುದಿಲ್ಲ ಬಿಡಿ.

ಕ್ರೀಡಾಂಗಣ ನಿರ್ಮಾಣದ ಬಗ್ಗೆ

75(1899); ಶ್ರೀ ತುಕಾರಾಮ್ ಇ. (ಸಂಡೂರು)

ಅ) ಸಂಡೂರು ಪಟ್ಟಣದಲ್ಲಿ ನಿರ್ಮಾಣ ಮಾಡುತ್ತಿರುವ ಕ್ರೀಡಾಂಗಣ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರಗಳನ್ನು ನೀಡುವುದು)

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಬಂದಿದೆ.

ಆ) ಸಂಡೂರು ಪಟ್ಟಣದಲ್ಲಿ ತಾಲ್ಲೂಕು ಕ್ರೀಡಾಂಗಣದ ಬಾಕಿ ಉಳಿದ ಕಾಮಗಾರಿಗಳಾದ ಭೂಮಿ ಸಮತಟ್ಟು ಮಾಡುವುದು, ಕ್ರೀಡಾ